ಸದನದಲ್ಲಿ ಉತ್ತರಿಸುವ
ಪ್ರಶ್ನೆಗಳ ಪಟ್ಟಿ
ಒಟ್ಟು ಪ್ರಶ್ನೆಗಳು – ೧೫

ಪಟ್ಟಿ–೭

# ಕರ್ನಾಟಕ ವಿಧಾನ ಪರಿಷತ್ತು

ನೂರ ಐವತ್ತ ಮೂರನೇ ಅಧಿವೇಶನ
ಬುಧವಾರ, ದಿನಾಂಕ: ೨೪ನೇ ಜುಲೈ, ೨೦೨೪

---

## ಸಮೂಹ – III

೧. ಸಾರಿಗೆ ಮತ್ತು ಮುಜರಾಯಿ ಸಚಿವರು

೨. ಲೋಕೋಪಯೋಗಿ ಸಚಿವರು

೩. ಕಂದಾಯ ಸಚಿವರು

೪. ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು

೫. ಪಶುಸಂಗೋಪನೆ ಮತ್ತು ರೇಷ್ಮೆ ಸಚಿವರು

೬. ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

---

## ರೈತರಿಗೆ ಬೆಳೆ ನಷ್ಟ ಪರಿಹಾರ ನೀಡುವ ಕುರಿತು

ಶ್ರೀ ಛಲವಾದಿ ಟಿ. ನಾರಾಂಯಣಸ್ವಾಮಿ (ವಿಧಾನ ಸಭೆಯಿಂದ ಚುನಾಯಿತರಾದವರು) –

೯೧ (೧೦೦೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ರಾಜ್ಯ ಸರ್ಕಾರವು ೨೦೨೩–೨೪ನೇ ಸಾಲಿನಲ್ಲಿ ಬರಪೀಡಿತವೆಂದು ಘೋಷಿಸಿದ ತಾಲ್ಲೂಕುಗಳ ಸಂಖ್ಯೆ ಎಷ್ಟು ; ಒಟ್ಟು ಬೆಳೆ ಹಾನಿಯಾದ ಪ್ರದೇಶವೆಷ್ಟು ; ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೆಳೆ ಹಾನಿಯಿಂದ ಅನ್ನದಾತರಿಗೆ ಆದ ನಷ್ಟವೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಆ) ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೆಳೆ ನಷ್ಟ ಅನುಭವಿಸಿದ ಒಟ್ಟು ರೈತರ ಸಂಖ್ಯೆ ಎಷ್ಟು ; ಬೆಳೆ ನಷ್ಟ ಪರಿಹಾರವನ್ನು ಪಡೆದ ರೈತರ ಸಂಖ್ಯೆ ಎಷ್ಟು ; ಎಷ್ಟು ಮೊತ್ತವನ್ನು ಪಾವತಿಸಲಾಗಿದೆ ; ಮುಂಗಾರು ಮತ್ತು ಹಿಂಗಾರು ಹಂಗಾಮಿನಲ್ಲಿ ಬೆಳೆ ನಷ್ಟ ಅನುಭವಿಸಿದ ಎಲ್ಲಾ ರೈತರಿಗೆ ಪರಿಹಾರವನ್ನು ಪಾವತಿಸಲಾಗಿದೆಯೇ ; ಪರಿಹಾರದಿಂದ ಹೊರಗುಳಿದ ರೈತರ ಸಂಖ್ಯೆ ಮತ್ತು ಕಾರಣಗಳನ್ನು ನೀಡುವುದು ; ಬೆಳೆ ನಷ್ಟ ಪರಿಹಾರವನ್ನು ಯಾವ ಮಾನದಂಡಗಳ ಅನುಸಾರ ಪಾವತಿ ಮಾಡಲಾಗಿದೆ ; ಪಾವತಿಸಲು ನಿಗದಿಪಡಿಸಿದ ಅರ್ಹತೆಗಳೇನು ; (ಸಂಪೂರ್ಣ ಮಾಹಿತಿ ನೀಡುವುದು)

(ಇ) ಮಳೆ ಕೊರತೆಯಿಂದಾದ ಬೆಳೆ ನಷ್ಟವನ್ನು ಮಾತ್ರ ಪರಿಗಣಿಸಿರುವುದು ನಿಜವೇ ; ಯಾವುದೇ ಬೆಳೆ ಬೆಳೆಯಲು ಸಾಧ್ಯವಾಗದ, ಜಲಾಶಯದಲ್ಲಿ ನೀರಿನ ಕೊರತೆ, ಹಿಂಗಾರು ಹಂಗಾಮಿನ ಬೆಳೆ ನಷ್ಟ ಮಾಡಿಕೊಂಡ ರೈತರಿಗೆ ಪರಿಹಾರ ವಿತರಿಸದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಎಷ್ಟು ಜನ ರೈತರಿಗೆ ಪರಿಹಾರ ವಿತರಿಸಿರುವುದಿಲ್ಲ ; ಕಾರಣವೇನು ; ಯಾವ ಕಾರಣಕ್ಕೆ ಇವರನ್ನು ಕಡೆಗಣಿಸಲಾಗಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಈ) ಬೆಳೆ ನಷ್ಟ ಅನುಭವಿಸಿದ ರೈತರಿಗೆ ರಾಜ್ಯ ಸರ್ಕಾರದಿಂದ ನೀಡಿರುವ ಪರಿಹಾರವೇನು ; ಬೆಳೆ ನಷ್ಟ ಪರಿಹಾರಕ್ಕಾಗಿ ಕೇಂದ್ರ ಸರ್ಕಾರವು ಮಂಜೂರು ಮಾಡಿದ ಮೊತ್ತವೆಷ್ಟು ; ರಾಜ್ಯ ಸರ್ಕಾರ ವಿನಿಯೋಗಿಸಿದ ಮೊತ್ತವೆಷ್ಟು ; ಸದರಿ ಮೊತ್ತವನ್ನು ಯಾವ ಉದ್ದೇಶಕ್ಕಾಗಿ ಬಳಕೆ ಮಾಡಿಕೊಳ್ಳಲಾಗಿದೆ ; ಸರ್ಕಾರವು ತನ್ನ ಸ್ವಂತ ನಿಧಿಯಿಂದ ಇಲ್ಲಿಯವರೆಗೆ ರೈತರಿಗೆ ಎಷ್ಟು ಪರಿಹಾರವನ್ನು ನೀಡಿದೆ ; (ಸಂಪೂರ್ಣ ಮಾಹಿತಿ ನೀಡುವುದು)

(ಉ) ಮುಂಗಾರು ಮತ್ತು ಹಿಂಗಾರು ಹಂಗಾಮು ಎರಡರಲ್ಲಿಯೂ ಆದ ಬೆಳೆ ನಷ್ಟಕ್ಕೆ ಪರಿಹಾರ ಪಾವತಿಸಲಾಗಿದೆಯೇ ಅಥವಾ ಒಂದೇ ಹಂಗಾಮಿನಲ್ಲಿ ಆದ ಬೆಳೆ ನಷ್ಟವನ್ನು ಪರಿಗಣಿಸಲಾಗಿದೆಯೇ ; ಒಂದು ವೇಳೆ ಒಂದೇ ಹಂಗಾಮನ್ನು ಮಾತ್ರ ಪರಿಗಣಿಸಿದರೆ ರೈತರಿಗೆ ಅನ್ಯಾಯ ಮಾಡಿದಂತಾಗುವುದಿಲ್ಲವೇ ; ವರ್ಷಪೂರ್ತಿ ಬರಗಾಲವಿದ್ದ ಕಾರಣ ಎರಡೂ ಹಂಗಾಮಿನಲ್ಲಿ ಆದ ಬೆಳೆ ನಷ್ಟಕ್ಕೆ ಪರಿಹಾರವನ್ನು ಪಾವತಿಸಲು ಸರ್ಕಾರ ಕ್ರಮಕೈಗೊಳ್ಳಬಹುದಲ್ಲವೇ ? (ಸಂಪೂರ್ಣ ಮಾಹಿತಿ ನೀಡುವುದು)

## ಕೊಡಗು ಜಿಲ್ಲೆಯಲ್ಲಿ ಅವ್ಯಾಹತವಾಗಿ ನಡೆಯುತ್ತಿರುವ ಭೂ ಪರಿವರ್ತನೆಯ ಕುರಿತು

**ಶ್ರೀ ಕುಶಾಲಪ್ಪ ಎಂ.ಪಿ.(ಸು.ಜಾ) (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೨ (೯೫೦) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕೊಡಗು ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಲ್ಲಿ ಕಾಫಿ ತೋಟಗಳು ಹಾಗೂ ಇನ್ನಿತರ ಜಮೀನುಗಳನ್ನು ಭೂ ಪರಿವರ್ತನೆಗೊಳಿಸಲು ಬಂದಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು ; ಮತ್ತು ಅವು ಯಾವುವು ; ಸದರಿ ಪ್ರಸ್ತಾವನೆಗಳನ್ನು ಅನುಮೋದಿಸಿ ಭೂ ಪರಿವರ್ತನೆಗೊಳಿಸಿರುವ ಪ್ರಸ್ತಾವನೆಗಳು ಎಷ್ಟು ; ಮತ್ತು ಅವು ಯಾವುವು ; ಎಕರೆ ಹಾಗೂ ತಾಲ್ಲೂಕುವಾರು ವಿವರ ನೀಡುವುದು ;

(ಆ) ಭೂ ಪರಿವರ್ತನೆಗೊಳಿಸಲು ಸ್ಥಳೀಯವಾಗಿ ವಿರೋಧಗಳು ಹಾಗೂ ಹೋರಾಟಗಳು ನಿರಂತರವಾಗಿ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಯಾವ ಕಾರಣಕ್ಕಾಗಿ ಹೋರಾಟವನ್ನು ಮಾಡುತ್ತಿದ್ದಾರೆ :

(ಇ) ವಿರೋಧ ಹಾಗೂ ಹೋರಾಟದ ನಡುವೆಯೂ ಭೂ ಪರಿವರ್ತನೆಯನ್ನು ಯಾವ ಕಾರಣಕ್ಕಾಗಿ ಮಾಡಲಾಗುತ್ತಿದೆ ; ಅಥವಾ ಭೂ ಪರಿವರ್ತನೆ ಕೋರಿ ಬಂದ ಪ್ರಸ್ತಾವನೆಗಳಿಗೆ ಅನುಮತಿ ನೀಡದಿರಲು ಇಲಾಖಾ

ನಿಯಮಾವಳಿಗಳಲ್ಲಿ ಅವಕಾಶ ಇಲ್ಲವೇ ; ಈ ಪ್ರಕ್ರಿಯೆಯು ನಿರಂತರವಾಗಿ ಇದೇ ರೀತಿ ಭೂ ಪರಿವರ್ತನೆಗೆ ಅನುಮತಿ ನೀಡುವ ಕಾನೂನು ರಾಜ್ಯದಲ್ಲಿ ಜಾರಿಯಲ್ಲಿದೆಯೇ ;

(ಈ) ಈ ಭೂ ಪರಿವರ್ತನೆ ಮಾಡುವ ಪ್ರಕ್ರಿಯೆಯನ್ನು ಕೈ ಬಿಡಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

## ಶ್ರೀ ಕುಕ್ಕೆ ಸುಬ್ರಮಣ್ಯ ದೇವಾಲಯದಲ್ಲಿ ಅನ್ನ ಪ್ರಸಾದಕ್ಕೆ ದಿನಸಿ ಖರೀದಿ ಕುರಿತು

**ಶ್ರೀ ಯು.ಬಿ. ವೆಂಕಟೇಶ್ (ನಾಮನಿರ್ದೇಶನ ಹೊಂದಿದವರು) –**

೯೩ (೯೨೭) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದಕ್ಷಿಣ ಕನ್ನಡ ಜಿಲ್ಲೆ, ಕಡಬ ತಾಲ್ಲೂಕು, ಕುಕ್ಕೆ ಗ್ರಾಮದ ಶ್ರೀ ಕುಕ್ಕೆ ಸುಬ್ರಮಣ್ಯ ದೇವಾಲಯದಲ್ಲಿ ಅನ್ನ ಪ್ರಸಾದಕ್ಕೆ ದಿನಸಿ ಪದಾರ್ಥಗಳನ್ನು ಇ–ಟೆಂಡರ್ ಮುಖಾಂತರ ಖರೀದಿಸದೆ ನೇರವಾಗಿ ಮಾರುಕಟ್ಟೆ ದರದಲ್ಲಿ ಖರೀದಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

(ಆ) ಮಾರುಕಟ್ಟೆ ದರದಲ್ಲಿ ಖರೀದಿಸುವ ಬಗ್ಗೆ ಆಗಿರುವ ಕರಾರು ಅಂಶಗಳೇನು ; ಕರಾರು ವಾಯಿದೆ ಯಾವಾಗ ಮುಕ್ತಾಯಗೊಳ್ಳಲಿದೆ;

(ಇ) ಹೊಸ ಕರಾರು ಪೂರ್ವದಲ್ಲಿ–ಇ–ಟೆಂಡರ್‌ಗೆ ಆದ್ಯತೆ ನೀಡಲಾಗುವುದೇ?

## ಮೀನುಗಾರಿಕೆ ಇಲಾಖೆಯಲ್ಲಿ ಹಣ ದುರುಪಯೋಗವಾಗಿರುವ ಬಗ್ಗೆ

**ಶ್ರೀ ತಿಪ್ಪಣ್ಣಪ್ಪ ಕಮಕನೂರ (ವಿಧಾನಸಭೆಯಿಂದ ಚುನಾಯಿತರಾದವರು) –**

೯೪ (೯೧೦) ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೀಲಿ ಕ್ರಾಂತಿ ಯೋಜನೆ ರಾಜ್ಯದ ಯಾವ ಯಾವ ಭಾಗದಲ್ಲಿ ಜಾರಿಗೆ ತರಲಾಗಿದೆ ; ಈ ಯೋಜನೆಗೆ ಕಳೆದ ೨ ವರ್ಷದಲ್ಲಿ ವ್ಯಯಿಸಲಾದ ಹಣವೆಷ್ಟು ; (ಕಲ್ಯಾಣ ಕರ್ನಾಟಕ ಭಾಗದ ಫಲಾನುಭವಿಗಳಿಗೆ ಮಂಜೂರಾದ ಮೊತ್ತ ಮುಂತಾದ ವಿವರಗಳೊಂದಿಗೆ ಮಾಹಿತಿ ಒದಗಿಸುವುದು)

(ಆ) ಮೀನು ಕೃಷಿಯ ಹಿತದೃಷ್ಟಿಯಿಂದ ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದಲ್ಲಿ ಇಲಾಖಾ ಕಾರ್ಯಕ್ರಮಕ್ಕೆ/ಪ್ರದರ್ಶನಕ್ಕೆ ವ್ಯಯಿಸಿರುವ ಹಣವೆಷ್ಟು ; (ಕಳೆದ ೨ ವರ್ಷದ ಮಾಹಿತಿ ಒದಗಿಸುವುದು)

(ಇ) ಮೀನು ಕೃಷಿಯ ಬಗ್ಗೆ ತರಬೇತಿ ನೀಡಲಾಗಿದೆಯೇ ; ಈ ತರಬೇತಿ ಆಯ್ಕೆಗೆ ಇರುವ ಮಾನದಂಡವೇನು ; ಎಷ್ಟು ಜನರಿಗೆ ತರಬೇತಿ ನೀಡಲಾಗಿದೆ ಹಾಗೂ ಅವರಿಗೆ ವ್ಯಯಿಸಲಾದ ಮೊತ್ತವೆಷ್ಟು ; (ಕಲ್ಯಾಣ ಕರ್ನಾಟಕಕ್ಕೆ ಸೀಮಿತವಾಗಿ ಮಾಹಿತಿ ನೀಡುವುದು)

(ಈ) ಈ ತರಬೇತಿ ನೆಪದಲ್ಲಿ ಪ್ರತಿ ತಿಂಗಳು ಕೋಟ್ಯಾಂತರ ಹಣ ದುರುಪಯೋಗವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಮೀನುಗಾರರಿಗೆ ನೀಡುವ ಸಲಕರಣೆ, ವಾಹನ ಇದರ ಹಂಚಿಕೆಯಲ್ಲೂ ಸಹ ಭಾರಿ ಅವ್ಯವಹಾರ ನಡೆದಿರುವುದರ ಬಗ್ಗೆ ಸರ್ಕಾರ ತನಿಖೆಗೆ ಮುಂದಾಗುವುದೇ ;

(ಉ) ಜಲಾಶಯಗಳಲ್ಲಿ ಮೀನುಮರಿ ಬಿತ್ತನೆಗೆ ಕಳೆದ ಎರಡು ವರ್ಷದಲ್ಲಿ ವ್ಯಯಿಸಿದ ಹಣವೆಷ್ಟು ; (ಜಲಾಶಯವಾರು ವಿವರ ಒದಗಿಸುವುದು) ಈ ಮೀನುಮರಿ ಖರೀದಿಯಲ್ಲಿ ಮತ್ತು ಬಿತ್ತನೆ ಮಾಡುವಾಗ ಅನುಸರಿಸುವ ಮಾನದಂಡವೇನು ; ಮೀನುಮರಿ ಬಿತ್ತನೆಯ ನೆಪದಲ್ಲಿ ಕೋಟ್ಯಾಂತರ ರೂಪಾಯಿ ಅವ್ಯವಹಾರವಾಗಿರುವದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಊ) ಮೀನುಗಾರಿಕೆ ಜೆಟ್ಟಿ ಮತ್ತು ಇಳಿದಾಣಗಳ ನಿರ್ಮಾಣ ಮತ್ತು ನವೀಕರಣ ನೆಪದಲ್ಲಿ ಎಲ್ಲೆಲ್ಲಿ ಎಷ್ಟೆಷ್ಟು ಹಣ ವಿನಿಯೋಗಿಸಲಾಗಿದೆ ; ಕಾಮಗಾರಿವಾರು ವಿವರ ಒದಗಿಸುವುದು ; ಈ ಕಾಮಗಾರಿಗಳು ಸಮರ್ಪಕವಾಗಿ ನಡೆಯದೇ ಹಣದ ದುರ್ಬಳಕೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

(ಋ) ಒಳನಾಡು ಮೀನುಗಾರಿಕೆ ಅಭಿವೃದ್ಧಿಗಾಗಿ ಸರ್ಕಾರ ಕಳೆದ ೩ ವರ್ಷದಲ್ಲಿ ವ್ಯಯಿಸಿದ ಮೊತ್ತವೆಷ್ಟು ; ಯೋಜನೆಯೊಂದಿಗೆ ಸಾಕಷ್ಟು ಹಣ ದುರುಪಯೋಗ ಆಗಿರುವ ಬಗ್ಗೆ ತನಿಖೆ ಮಾಡಲಾಗುವುದೇ ? (ಮಾಹಿತಿ ಒದಗಿಸುವುದು)

## ವಿಕಲಚೇತನರಿಗೆ ನೀಡುತ್ತಿರುವ ಪಿಂಚಣಿಯನ್ನು ಹೆಚ್ಚು ಮಾಡುವ ಬಗ್ಗೆ

**ಶ್ರೀ ವೈ.ಎಂ. ಸತೀಶ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೫ (೮೮೨) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :-

(ಅ) ರಾಜ್ಯದಲ್ಲಿ ವಿಕಲಚೇತನರಿಗೆ ನೀಡಲಾಗುತ್ತಿರುವ ಪಿಂಚಣಿ ಮೊತ್ತ ಎಷ್ಟು ; ಯಾವ ಆಧಾರದ ಮೇಲೆ ಮತ್ತು ಎಷ್ಟು ಪಿಂಚಣಿ ನೀಡಲಾಗುತ್ತಿದೆ ; (ಸರ್ಕಾರದ ಆದೇಶದ ಪ್ರತಿಗಳೊಂದಿಗೆ ಮಾಹಿತಿ ನೀಡುವುದು)

(ಆ) ರಾಜ್ಯದಲ್ಲಿನ ಎಷ್ಟು ಅಂಗವಿಕಲರುಗಳಿಗೆ ಪಿಂಚಣಿಯನ್ನು ನೀಡಲಾಗುತ್ತಿದೆ ; (ಜಿಲ್ಲಾವಾರು ಮಾಹಿತಿ ನೀಡುವುದು)

(ಇ) ರಾಜ್ಯದಲ್ಲಿ ವಿಕಲಚೇತನರಿಗೆ ನೀಡುವ ಪಿಂಚಣಿಗಾಗಿ ಬಜೆಟ್‌ನಲ್ಲಿ ಮೀಸಲಿಟ್ಟ ಒಟ್ಟು ಹಣ ಎಷ್ಟು ; ಕಳೆದ ಮೂರು ವರ್ಷಗಳ ಮಾಹಿತಿ ನೀಡುವುದು ;

(ಈ) ರಾಜ್ಯದಲ್ಲಿನ ಅಂಗವಿಕಲರುಗಳಿಗೆ ಪಿಂಚಣಿಯನ್ನು ಹೆಚ್ಚಿಸುವ ಯಾವುದಾದರೂ ಪ್ರಸ್ತಾವನೆ/ಶಿಫಾರಸ್ಸುಗಳು ಸರ್ಕಾರದ ಮುಂದಿದೆಯೇ ; ಇಲ್ಲವಾದಲ್ಲಿ, ತುಂಬಾ ಕಡಿಮೆ ಸಂಖ್ಯೆಯಲ್ಲಿರುವ ಇವರುಗಳಿಗೆ ಹೆಚ್ಚಿನ ಪಿಂಚಣಿಯನ್ನು ನೀಡುವ ಬಗ್ಗೆ ಸರ್ಕಾರದ ನಿಲುವೇನು ? (ಮಾಹಿತಿ ನೀಡುವುದು)

## ಗೃಹ ಮಂಡಳಿಯಿಂದ ನಿರ್ಮಾಣ ಮಾಡಲಾಗಿರುವ ಟೌನ್‌ಶಿಪ್‌ಗಳ ಬಗ್ಗೆ

ಶ್ರೀ ಗೋವಿಂದರಾಜು (ವಿಧಾನಸಭೆಯಿಂದ ಚುನಾಯಿತರಾದವರು) –

೯೬ (೯೧೯) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕರ್ನಾಟಕ ಗೃಹ ಮಂಡಳಿವತಿಯಿಂದ ಪ್ರಸ್ತುತ ಎಷ್ಟು ಟೌನ್‌ಶಿಪ್‌ಗಳ ನಿರ್ಮಾಣ ಮಾಡಲಾಗುತ್ತಿದೆ ;

(ಆ) ಹೊಸಕೋಟೆ ಮತ್ತು ದೇವನಹಳ್ಳಿಯಲ್ಲಿ ನಿರ್ಮಿಸಲು ಉದ್ದೇಶಿರುವ ಅತ್ಯಾಧುನಿಕ ಟೌನ್‌ಶಿಪ್ ನಿರ್ಮಾಣ ಕಾಮಗಾರಿಯು ಯಾವ ಹಂತದಲ್ಲಿದೆ ;

(ಇ) ಸದರಿ ನಿವೇಶನಕ್ಕಾಗಿ ಈಗಾಗಲೇ ಎಷ್ಟು ಅರ್ಜಿಗಳು ಬಂದಿವೆ ; ಹಾಗೂ ಅರ್ಜಿ ಶುಲ್ಕ ಮತ್ತು ಆರಂಭಿಕ ಠೇವಣಿಗಳನ್ನು ಕಟ್ಟಲು ಎಷ್ಟು ಹಣ ನಿಗದಿಪಡಿಸಲಾಗಿದೆ ;

(ಈ) ಇದುವರೆಗೂ ಎಷ್ಟು ಹಣ ಸಂದಾಯವಾಗಿದೆ ಹಾಗೂ ಸಂದಾಯವಾಗಿರುವ ಹಣವನ್ನು ಯಾವ ಬ್ಯಾಂಕಿನಲ್ಲಿ ಠೇವಣಿ ಇಡಲಾಗಿದೆ ; ಠೇವಣಿ ರೂಪದಲ್ಲಿ ಎಷ್ಟು ಬಡ್ಡಿ ಸಂದಾಯವಾಗಿವೆ ;

(ಉ) ಟೌನ್‌ಶಿಪ್‌ಗೆ ಅಗತ್ಯವಿರುವ ಎಷ್ಟು ಎಕರೆ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ ಹಾಗೂ ಭೂಮಿಯನ್ನು ನೀಡಿದ ರೈತರಿಗೆ ಪೂರ್ಣ ಪ್ರಮಾಣದಲ್ಲಿ ಪರಿಹಾರವನ್ನು ನೀಡಲಾಗಿದೆಯೇ ; ಹಾಗಿದ್ದಲ್ಲಿ, ಎಷ್ಟು ಹಣ ಪರಿಹಾರ ನೀಡಲಾಗಿದೆ ಅಥವಾ ಪರಿಹಾರ ನೀಡದೆ ಇರಲು ಕಾರಣಗಳೇನು ? (ಮಾಹಿತಿ ನೀಡುವುದು)

## ಕಾವೇರಿ ೨.೦ ತಂತ್ರಾಂಶದಲ್ಲಿ ಸಾರ್ವಜನಿಕರಿಗೆ ಉಂಟಾಗಿರುವ ಸಮಸ್ಯೆಯ ಕುರಿತು

**ಶ್ರೀ ಚಿದಾನಂದ್ ಎಂ. ಗೌಡ (ಪದವೀಧರರ ಕ್ಷೇತ್ರ) –**

೯೭ (೮೫೮) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಕಾವೇರಿ ೨.೦೦ ತಂತ್ರಾಂಶದಲ್ಲಿ ನೋಂದಣಿ ಮಾಡುವ ಸಮಯದಲ್ಲಿ ಹೆಚ್ಚು ಜನ ಹೊಂದಿದ ಕುಟುಂಬವಿದ್ದಲ್ಲಿ, ಅವರ ವಿವರ ಮತ್ತು ಫೋಟೋ ಅಪ್‌ಲೋಡ್ ಮಾಡಲು ಸಮಯ ಮುಗಿದರೆ ಲಾಗ್‌ಔಟ್ ಆಗುತ್ತಿದ್ದು, ಆನಂತರ ಹೊಸದಾಗಿ ಅಪ್ಲೋಡ್ ಮಾಡಬೇಕಾಗಿರುವುದರಿಂದ ನಿಗದಿಪಡಿಸಿದ ಸಮಯ ಮುಗಿದರೂ ಸಲ್ಲಿಸುತ್ತಿರುವ ಅರ್ಜಿಯನ್ನು ಮುಂದುವರಿಸುವ ಅವಕಾಶ ನೀಡಲಾಗುವುದೇ ;

(ಆ) ಸಿಟಿಜ಼ನ್ ಲಾಗಿನ್ ಅಸಮರ್ಪಕವಾಗಿದ್ದು, ಲಾಗಿನ್ ವಿಫಲವಾಗುತ್ತಿರುವುದರಿಂದ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮವೇನು ;

(ಇ) ಸಾರ್ವಜನಿಕರು ಸಕಾಲಕ್ಕೆ ಇ.ಸಿ. (ಋಣಭಾರ ಪ್ರಮಾಣ ಪತ್ರ) ಪಡೆಯಲು ಸಾಧ್ಯವಾಗದೆ, ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಸಮಸ್ಯೆ ಪರಿಹಾರಕ್ಕೆ ಸರ್ಕಾರ ಕೈಗೊಂಡ ಕ್ರಮವೇನು ;

(ಈ) ಉಪ ನೋಂದಣಾಧಿಕಾರಿಗಳ ಕಛೇರಿಗಳಲ್ಲಿ ಕಾವೇರಿ ೨.೦೦ ತಂತ್ರಾಂಶ ಅಪ್‌ಗ್ರೇಡ್ ಮಾಡಿದ ನಂತರ ಸಾರ್ವಜನಿಕರಿಗೆ ಹಲವು ರೀತಿಯ ತೊಂದರೆಯುಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ; ಬಂದಿದ್ದಲ್ಲಿ, ಸದರಿ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು ;

(ಉ) ಅನಿರೀಕ್ಷಿತ ಕಾರಣಗಳಿಂದ ನೋಂದಣಿಯು ರದ್ದಾದಲ್ಲಿ, ಪಾವತಿ ಮಾಡಿರುವ ನೋಂದಣಿ ಶುಲ್ಕವನ್ನು ಹಿಂಪಡೆಯಲು ಆಯ್ಕೆಯನ್ನು ನೀಡಲಾಗಿದೆಯೇ ; ನೀಡದಿದ್ದಲ್ಲಿ, ಶುಲ್ಕ ಹಿಂಪಡೆಯುವ ಬಗೆ ಹೇಗೆ ?

## ಲೋಕೋಪಯೋಗಿ ಇಲಾಖೆಯಿಂದ ಕಾಮಗಾರಿಗಳು ಮಂಜೂರಾಗಿರುವ ಬಗ್ಗೆ

**ಶ್ರೀ ಎಂ.ಎಲ್. ಅನಿಲ್ ಕುಮಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೯೮ (೯೫೮) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ದೇವನಹಳ್ಳಿ, ವಿಜಯಪುರ, ಹೆಚ್ ಕ್ರಾಸ್, ವೇಮಗಲ್, ಮಾಲೂರು, ತಮಿಳುನಾಡು ಗಡಿಯವರೆಗೆ ಕೈಗಾರಿಕಾ ಸಂಪರ್ಕವನ್ನು ಕಲ್ಪಿಸಲು ನಾಲ್ಕು ಮತ್ತು ಆರು ಪಥದ ೧೨೩ ಕಿ.ಮೀ. ಉದ್ದದ ರಸ್ತೆ ನಿರ್ಮಾಣ ಕಾಮಗಾರಿಯನ್ನು ೨೦೨೩–೨೪ರ ಆಯವ್ಯಯದಲ್ಲಿ ಘೋಷಣೆ ಮಾಡಿದ್ದು, ಡಿಪಿಆರ್ ಟೆಂಡರ್ ಪ್ರಕ್ರಿಯೆ ಯಾವ ಹಂತದಲ್ಲಿದೆ ; ಸದರಿ ಯೋಜನೆಯ ಬಗ್ಗೆ ಸಂಪೂರ್ಣವಾದ ಮಾಹಿತಿ ನೀಡುವುದು ; (ಅನುದಾನದ ವಿವರಗಳ ಸಂಪೂರ್ಣವಾದ ಮಾಹಿತಿ ನೀಡುವುದು)

(ಆ) ಹೈಬ್ರಿಡ್ ಆನ್ಯೂಟಿ ಯೋಜನೆಯ ಬಗ್ಗೆ ಸಂಪೂರ್ಣವಾದ ಮಾಹಿತಿ ನೀಡುವುದು ; ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಕಳೆದ ೩ ವರ್ಷಗಳಿಂದ ಇಲ್ಲಿಯವರೆಗೂ ಈ ಯೋಜನೆಯಡಿಯಲ್ಲಿ ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳು ಯಾವುವು ; (ಕಾಮಗಾರಿವಾರು ಅನುದಾನವಾರು ಮತ್ತು ಕಾಮಗಾರಿಯು ಯಾವ ಹಂತದಲ್ಲಿದೆ ಎಂಬುದರ ಪೂರ್ಣ ಮಾಹಿತಿ ನೀಡುವುದು)

(ಇ) ಕಳೆದ ೩ ವರ್ಷಗಳಲ್ಲಿ ಲೋಕೋಪಯೋಗಿ ಇಲಾಖೆಯಿಂದ ವಿವಿಧ ಯೋಜನೆಗಳಡಿ ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ

ಕೈಗೆತ್ತಿಕೊಳ್ಳಲಾಗಿರುವ ಕಾಮಗಾರಿಗಳು ಯಾವುವು ; ಈ ಕಾಮಗಾರಿಗಳಿಗೆ ಮಂಜೂರಾದ ಅನುದಾನವೆಷ್ಟು ? (ಕಾಮಗಾರಿವಾರು ಸಂಪೂರ್ಣ ವಿವರ ನೀಡುವುದು)

## ರಸ್ತೆ ಸಾರಿಗೆಯ ನಿಗಮಗಳಿಗೆ ಹಣ ಬಿಡುಗಡೆ ಮಾಡುವ ಕುರಿತು

**ಶ್ರೀಮತಿ ಭಾರತಿ ಶೆಟ್ಟಿ (ನಾಮನಿರ್ದೇಶನ ಹೊಂದಿದವರು) –**

೯೯ (೮೮೦) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಸ್ತೆ ಸಾರಿಗೆಯ ವಿವಿಧ ನಿಗಮಗಳಿಗೆ ಸರ್ಕಾರ ಯಾವ ಪ್ರಮಾಣದಲ್ಲಿ ಎಷ್ಟು ಹಣ ಬಾಕಿ ಉಳಿಸಿಕೊಂಡಿದೆ ; ಇದಕ್ಕೆ ಕಾರಣಗಳೇನು ;

(ಆ) ಈ ಹಣವನ್ನು ಎಷ್ಟು ದಿನಗಳ ಒಳಗಾಗಿ ವಿವಿಧ ನಿಗಮಗಳಿಗೆ ಸಂದಾಯ ಮಾಡಲಾಗುತ್ತದೆ ? (ವಿವರ ಒದಗಿಸುವುದು)

## ಬೆಳಗಾವಿ ನಗರಕ್ಕೆ ರಿಂಗ್ ರಸ್ತೆ ನಿರ್ಮಿಸುವ ಕುರಿತು

**ಶ್ರೀ ಎಂ. ನಾಗರಾಜು (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೦ (೮೬೨) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ನಗರಕ್ಕೆ ರಿಂಗ್ ರಸ್ತೆ ನಿರ್ಮಿಸಲು ಈ ಹಿಂದೆ ಯೋಜಿಸಿ ಕಾಮಗಾರಿಯನ್ನು ಲೋಕೋಪಯೋಗಿ ಇಲಾಖೆಯ ಅಂಗ ಸಂಸ್ಥೆಗೆ ನೀಡಲಾಗಿದ್ದು, ಸದರಿ ಕಾಮಗಾರಿ ಪ್ರಸ್ತುತ ಯಾವ ಹಂತದಲ್ಲಿದೆ ;

(ಆ) ಸದರಿ ರಿಂಗ್ ರಸ್ತೆ ನಿರ್ಮಿಸುವ ಕಾಮಗಾರಿ ಸಾಕಷ್ಟು ವಿಳಂಬವಾಗಿದ್ದು, ಇದಕ್ಕೆ ಕಾರಣಗಳೇನು ;

(ಇ) ಈ ರಸ್ತೆ ಕಾಮಗಾರಿಗಾಗಿ ಬೇಕಾಗುವ ಭೂಮಿಯನ್ನು ಸರ್ಕಾರ ಭೂಸ್ವಾಧೀನಪಡಿಸಿಕೊಂಡಿದೆಯೇ ; ಮತ್ತು ಈ ಕಾಮಗಾರಿಯನ್ನು ಯಾವ ಕಾಲಮಿತಿಯಲ್ಲಿ ಪೂರ್ಣಗೊಳಿಸಲಾಗುವುದು ? (ಮಾಹಿತಿ ನೀಡುವುದು)

## ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿನ ಕೊಳಗೇರಿ ಪ್ರದೇಶಗಳ ಕುರಿತು

**ಡಾ: ತಳವಾರ್ ಸಾಬಣ್ಣ (ನಾಮನಿರ್ದೇಶನ ಹೊಂದಿದವರು) –**

೧೦೧ (೯೫೯) ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಳಗಾವಿ ಮಹಾನಗರ ಪಾಲಿಕೆ ವ್ಯಾಪ್ತಿಯಲ್ಲಿ ಬರುವ ಘೋಷಿತ ಮತ್ತು ಅಘೋಷಿತ ಕೊಳಗೇರಿಗಳ ಸಂಖ್ಯೆ ಎಷ್ಟು ; ಮತ್ತು ಅವು ಯಾವುವು ; (ವಿವರ ನೀಡುವುದು)

(ಆ) ಘೋಷಿತ ಕೊಳಗೇರಿಗಳಲ್ಲಿ ವಾಸಿಸುವ ನಿವಾಸಿಗಳಿಗೆ ಹಕ್ಕು ಪತ್ರ ನೀಡಲಾಗಿದೆಯೇ ; ಇನ್ನು ಎಷ್ಟು ಘೋಷಿತ ಕೊಳಗೇರಿಯ ನಿವಾಸಿಗಳಿಗೆ ಹಕ್ಕು ಪತ್ರ ನೀಡಬೇಕಾಗಿದೆ ; ವಿಳಂಬಕ್ಕೆ ಕಾರಣಗಳೇನು ; (ವಿವರ ನೀಡುವುದು)

(ಇ) ಬೆಳಗಾವಿ ಮಹಾನಗರ ವ್ಯಾಪ್ತಿಯಲ್ಲಿ ಬರುವ ವಾರ್ಡ್ ನಂ. ೩೫ರಲ್ಲಿ ಬರುವ ಸೆಕ್ಟರ್ ನಂ.೭ ಮಂಟಮುರಿ ಕಾಲೋನಿಯ ಜನತಾ ಪ್ಲಾಟ್‌ನಲ್ಲಿ ಹತ್ತಾರು ವರ್ಷಗಳಿಂದ ವಾಸಿಸುತ್ತಿರುವ ಅಲ್ಲಿನ ಬಡಕುಟುಂಬಗಳಿಗೆ ಹಕ್ಕು ಪತ್ರಗಳನ್ನು ಯಾವಾಗ ನೀಡಲು ಕ್ರಮ ಕೈಗೊಳ್ಳಲಾಗುವುದು ;

(ಈ) ಬೆಳಗಾವಿ ಮಹಾನಗರದಲ್ಲಿ ಬರುವ ಕೊಳಗೇರಿಗಳ ಅಭಿವೃದ್ಧಿ ಕುರಿತು ಕರ್ನಾಟಕ ಕೊಳಗೇರಿ ಅಭಿವೃದ್ಧಿ ಮಂಡಳಿ ಮತ್ತು ಬೆಳಗಾವಿಯ ಸ್ಮಾರ್ಟ್ ಸಿಟಿ ಮಂಡಳಿಯು ಕೈಗೊಂಡ ಕ್ರಮಗಳೇನು ? (ವಿವರ ನೀಡುವುದು)

## ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ಆಸ್ತಿಯ ಕುರಿತು

**ಶ್ರೀ ಎನ್. ರವಿಕುಮಾರ್ (ವಿಧಾನಸಭೆಯಿಂದ ಚುನಾಯಿತರಾದವರು) –**

೧೦೨ (೯೦೮) ಸಾರಿಗೆ ಮತ್ತು ಮುಜರಾಯಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ಬೆಂಗಳೂರು ನಗರ ನೀಲಸಂದ್ರ ಗ್ರಾಮದ ಸರ್ವೆ ನಂ. ೭೯ರಲ್ಲಿ ೧೫ ಎಕರೆ ೧೨ ಗುಂಟೆ ಜಾಗ ಬೆಂಗಳೂರು ನಗರ ತಿಗಳರಪೇಟೆ ಶ್ರೀ ಧರ್ಮರಾಯ ಸ್ವಾಮಿ ದೇವಾಲಯಕ್ಕೆ ಸೇರಿರುವ ಕುರಿತು ಮುಜರಾಯಿ ಇಲಾಖೆಯಲ್ಲಿ ಮಾಹಿತಿ ಇದೆಯೇ ; ಪ್ರಸ್ತುತ ಆ ಜಾಗದ ಪಹಣಿಯಲ್ಲಿ ಯಾರ ಹೆಸರು ನಮೂದು ಇದೆ ; ಎಷ್ಟು ಜಾಗ ಒತ್ತುವರಿಯಾಗಿದೆ ; ಜಾಗ ಒತ್ತುವರಿಗೆ ಸಹಕರಿಸಿದ ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲಿಸದಿರಲು ಕಾರಣವೇನು : (ವಿವರ ನೀಡುವುದು)

(ಆ) ಗೌರವಾನ್ವಿತ ನ್ಯಾಯಾಲಯವು ಸದರಿ ಜಮೀನು ಮುಜರಾಯಿ ಇಲಾಖೆಗೆ ಸೇರಿದ್ದು ಎಂಬುದಾಗಿ ತೀರ್ಪು ನೀಡಿದ ಬಳಿಕವೂ ಸದರಿ ಜಮೀನನ್ನು ಸರ್ಕಾರ ಮುಜರಾಯಿ ಇಲಾಖೆಯ ವಶಕ್ಕೆ ತೆಗೆದುಕೊಳ್ಳಲು ಸಾಧ್ಯವಾಗದಿರಲು ಕಾರಣವೇನು ;

(ಇ) ಪ್ರಸ್ತುತ ಯಾವುದೇ ಒತ್ತುವರಿಯಾಗದೆ ಖಾಲಿ ಇರುವ ನೂರಾರು ಕೋಟಿ ರೂ. ಬೆಲೆ ಬಾಳುವ ೭ ಎಕರೆಗೂ ಹೆಚ್ಚು ಜಮೀನಿಗೆ ಕಾಂಪೌಂಡು ಹಾಕಲಾಗಿದೆಯೇ ; ಇಲ್ಲವಾದಲ್ಲಿ, ಯಾವಾಗ ಕಾಂಪೌಂಡು ಹಾಕಲಾಗುವುದು ; ಈ ವಿಳಂಬಕ್ಕೆ ಕಾರಣರಾದ ಎಷ್ಟು ಅಧಿಕಾರಿಗಳ ಮೇಲೆ ಕ್ರಿಮಿನಲ್ ಮೊಕದ್ದಮೆ ದಾಖಲು ಮಾಡಲಾಗಿದೆ ; (ವಿವರ ನೀಡುವುದು)

(ಈ) ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ವಿವರಗಳೇನು ; (ಜಿಲ್ಲಾವಾರು, ದೇವಸ್ಥಾನವಾರು ವಿವರ ನೀಡುವುದು)

(ಉ) ರಾಜ್ಯದ ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯ ಒಟ್ಟು ಮೌಲ್ಯವೆಷ್ಟು ; ದೇವಸ್ಥಾನದ ಜಾಗ ಒತ್ತುವರಿಯಾಗಿರುವ ಕುರಿತು ಸರ್ಕಾರದ ಗಮನಕ್ಕೆ ಬಂದಿದೆಯೇ ; ಸದರಿ ಒತ್ತುವರಿ ತೆರವುಗೊಳಿಸಲು ಕೈಗೊಂಡ ಕ್ರಮಗಳೇನು ; (ವಿವರ ನೀಡುವುದು)

(ಊ) ದೇವಸ್ಥಾನಗಳು ಹೊಂದಿರುವ ಸ್ಥಿರಾಸ್ತಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಪಹಣಿ ಮಾಡಲು ಸರ್ಕಾರ ಯಾವ ಕ್ರಮ ಕೈಗೊಂಡಿದೆ ; ಕಳೆದ ಎರಡು ವರ್ಷದಲ್ಲಿ ಎಷ್ಟು ಎಕರೆ ಭೂಮಿಯನ್ನು ಸಂಬಂಧಿಸಿದ ದೇವರ ಹೆಸರಿಗೆ ಖಾತೆ, ಪಹಣಿ ಮಾಡಲಾಗಿದೆ ? (ಜಿಲ್ಲಾವಾರು ವಿವರ ನೀಡುವುದು)

## ಜಮೀನುಗಳ ಮಾರ್ಗಸೂಚಿ ದರಗಳ ಪರಿಷ್ಕರಣೆ ಕುರಿತು

**ಶ್ರೀ ಪಿ.ಹೆಚ್. ಪೂಜಾರ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೩ (೯೯೬) ಕಂದಾಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ರಾಜ್ಯ ಸರ್ಕಾರ ಕಳೆದ ವರ್ಷ ರಾಜ್ಯಾದ್ಯಂತ ಜಮೀನುಗಳ ಮಾರ್ಗಸೂಚಿ ದರಗಳನ್ನು (Guidence Value) ಹೆಚ್ಚುವರಿ ಮಾಡಿದ್ದು, ಹೆಚ್ಚುವರಿ ಮಾಡಲು ಕಾನೂನಿನ ಆಧಾರ ಹಾಗೂ ಸುತ್ತೋಲೆಗಳಾವುವು ; ಅನುಸರಿಸಲಾದ ಮಾನದಂಡಗಳೇನು ; (ಮಾಹಿತಿ ಒದಗಿಸುವುದು)

(ಆ) ಕಳೆದ ಹತ್ತಾರು ವರ್ಷಗಳಿಂದ ಬಾಗಲಕೋಟೆ, ವಿಜಯಪುರ ಅವಳಿ ಜಿಲ್ಲೆಗಳ ಮಾರ್ಗಸೂಚಿ ದರಗಳಲ್ಲಿ ಏನೂ ಹೆಚ್ಚುವರಿ ಮಾಡದೇ, ಕಳೆದ ವರ್ಷ ಮಾತ್ರವೆ ಕೆಲವು ತಾಲ್ಲೂಕಿನ ಜಮೀನುಗಳ ದರಗಳನ್ನಷ್ಟೇ ಪರಿಷ್ಕರಣೆ ಮಾಡಿ ಮುಳುಗಡೆ ಪ್ರದೇಶ ವ್ಯಾಪ್ತಿಯ ಬಾಗಲಕೋಟೆ, ಹುನಗುಂದ ಮತ್ತು ಬಬಲೇಶ್ವರ, ಬಾಗೇವಾಡಿ ತಾಲ್ಲೂಕಿನ ಜಮೀನುಗಳ ದರ ಹೆಚ್ಚುವರಿ ಮಾಡದೇ ಬಿಟ್ಟಿರುವುದಕ್ಕೆ ಕಾರಣಗಳೇನು ; ಇದರಿಂದ ರೈತರು ಭೂ ಸ್ವಾಧೀನದ ಹೊಸ ಕಾನೂನಿನಂತೆ ನ್ಯಾಯಯುತ ಪರಿಹಾರ ಪಡೆಯುವಲ್ಲಿ ವಂಚಿತರಾಗಬಹುದಾದ ಮಾಹಿತಿ ಸರ್ಕಾರಕ್ಕೆ ಬಂದಿದೆಯೇ ;

(ಇ) ಹಾಗಿದ್ದಲ್ಲಿ, ಈ ತಾಲ್ಲೂಕಿನ ಜಮೀನುಗಳ ಮಾರ್ಗಸೂಚಿ ದರಗಳನ್ನು ಹೆಚ್ಚುವರಿ ಮಾಡಲು ಸರ್ಕಾರ ಕ್ರಮ ಕೈಗೊಳ್ಳಲಾಗುವುದೇ ? (ಸಂಪೂರ್ಣ ಮಾಹಿತಿ ನೀಡುವುದು)

## ೨೦೨೨–೨೦೨೩ ಹಾಗೂ ೨೦೨೩–೨೦೨೪ನೇ ಸಾಲಿನಲ್ಲಿ ಸರ್ಕಾರ ಅನುಮೋದನೆ ನೀಡಿದ ಕಾಮಗಾರಿಗಳ ಕುರಿತು

**ಶ್ರೀ ದಿನೇಶ್ ಗೂಳಿಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)–**

೧೦೪ (೮೬೫) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ೨೦೨೨–೨೦೨೩ನೇ ಸಾಲಿನಲ್ಲಿ ಸರ್ಕಾರ ಯಾವ ಯಾವ ಕಾಮಗಾರಿಗಳನ್ನು ಮಂಜೂರು ಮಾಡಿ ಅನುಮೋದನೆ ನೀಡಿದೆ ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಆ) ಆ ನಂತರ, ಅನುಮೋದನೆ ನೀಡಲಾಗಿದ್ದ ಕಾಮಗಾರಿಗಳಲ್ಲಿ ಯಾವ ಯಾವ ಕಾಮಗಾರಿಗಳನ್ನು ತಡೆಹಿಡಿಯಲಾಗಿದೆ ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಇ) ೨೦೨೩, ಮೇ ೨೦ರ ನಂತರ ಸರ್ಕಾರ ತಡೆಹಿಡಿಯಲಾಗಿದ್ದ ಕಾಮಗಾರಿಗಳ ಪೈಕಿ, ಯಾವ ಯಾವ ಕಾಮಗಾರಿಗಳಿಗೆ ಪುನರ್ ಅನುಮೋದನೆ ನೀಡಲಾಗಿದೆ ; ಹಾಗೂ ಪುನರ್ ಅನುಮೋದನೆ ನೀಡಲಾದ ಕಾಮಗಾರಿಗಳಿಗೆ ಯಾವ ಯಾವ ಲೆಕ್ಕಶೀರ್ಷಿಕೆಗಳಡಿ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಲಾಗಿದೆ ; (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

(ಈ) ೨೦೨೩–೨೦೨೪ನೇ ಸಾಲಿನಲ್ಲಿ ರಾಜ್ಯ ಸರ್ಕಾರ ಯಾವ ಯಾವ ಲೆಕ್ಕಶೀರ್ಷಿಕೆಗಳಡಿ ಯಾವ ಯಾವ ಕಾಮಗಾರಿಗಳಿಗೆ ಎಷ್ಟೆಷ್ಟು ಅನುದಾನ ಬಿಡುಗಡೆ ಮಾಡಿದೆ ? (ವಿಧಾನಸಭಾ ಕ್ಷೇತ್ರವಾರು ಮಾಹಿತಿ ನೀಡುವುದು)

## ನೈಸ್ ಸಂಸ್ಥೆಯು ಜಮೀನನ್ನು ವಶಪಡಿಸಿಕೊಂಡಿರುವ ಬಗ್ಗೆ

**ಶ್ರೀ ಹೆಚ್.ಎಸ್. ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) –**

೧೦೫ (೯೮೪) ಲೋಕೋಪಯೋಗಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ :–

(ಅ) ನೈಸ್ ಸಂಸ್ಥೆಗೆ ನೀಡಿರುವ ಒಟ್ಟು ಜಾಗ/ಜಮೀನು ಎಷ್ಟು ಮತ್ತು ರೈತರಿಂದ ಸಾರ್ವಜನಿಕರಿಂದ ಯಾವ ಆಧಾರದ ಮೇಲೆ ಭೂಸ್ವಾಧೀನ ಮಾಡಲಾಗಿದೆ ;

(ಆ) ನೈಸ್ ಸಂಸ್ಥೆಯು ಈಗಾಗಲೇ ರಸ್ತೆ ನಿರ್ಮಿಸಿ ಮತ್ತೊಮ್ಮೆ ಭೂ ಸ್ವಾಧೀನಪಡಿಸಿಕೊಂಡಿರುವ ಭೂಮಿಯೆಷ್ಟು ಮತ್ತು ಯಾವ ಉದ್ದೇಶಕ್ಕೆ ಭೂ ಸ್ವಾಧೀನ ಮಾಡಲಾಗಿದೆ ;

(ಇ) ನೈಸ್ ಸಂಸ್ಥೆಯು ಪ್ರಸ್ತುತ ಇಲ್ಲಿಯವರೆಗೆ ರೈತರು ಸಾರ್ವಜನಿಕರಿಂದ ಪಡೆದ ಜಮೀನು ಆಸ್ತಿಗೆ ಎಷ್ಟು ಪರಿಹಾರ ಒದಗಿಸಲಾಗಿದೆ ಮತ್ತು ಪರಿಹಾರಗಳಿಗೆ ಯಾವ್ಯಾವ ಮಾನದಂಡ ಪರಿಗಣಿಸಲಾಗುತ್ತದೆ ; (ವಿವರ ನೀಡುವುದು)

(ಈ) ನೈಸ್ ಸಂಸ್ಥೆಯ ಮೇಲೆ ಇದುವರೆಗೂ ದಾಖಲಾಗಿರುವ ಒಟ್ಟು ದೂರುಗಳ ಸಂಖ್ಯೆ ಎಷ್ಟು ;

(ಉ) ನೈಸ್ ಸಂಸ್ಥೆಯು ವಶಪಡಿಸಿಕೊಂಡಿರುವ ಜಮೀನನ್ನು ಯಾವ ಯಾವ ಉಪಯೋಗಕ್ಕಾಗಿ ವಶಪಡಿಸಿಕೊಂಡಿದ್ದಾರೆ ; ಪ್ರಸ್ತುತ ಯಾವ ಕೆಲಸಗಳಿಗೆ ಉಪಯೋಗ ಮಾಡುತ್ತಿದ್ದಾರೆ ? (ವಿವರ ನೀಡುವುದು)

**ಕೆ.ಆರ್. ಮಹಾಲಕ್ಷ್ಮಿ**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

ಸರ್ಕಾರಿ ಮುದ್ರಣಾಲಯ, ವಿಕಾಸ ಸೌಧ, ಬೆಂಗಳೂರು, ಕಾ.ಸೂ.278/ಪಿ5

**List of Questions**
**for Oral Answers**

**Total No. of**
**Questions - 15**

# LIST - 07

# KARNATAKA LEGISLATIVE COUNCIL

## ONE HUNDRED AND FIFTY THIRD SESSION

## Wednesday, the 24th July, 2024

### GROUP - III

1. Minister for Transport and Muzrai
2. Minister for Public Works
3. Minister for Revenue
4. Minister for Housing, Wakf and Minority Welfare .
5. Minister for Animal Husbandry and Sericulture
6. Minister for Fisheries and Ports and Inland Water Transport

### CROP LOSS COMPENSATION FOR FARMERS

**Sri Chalavadi T. Narayanaswamy (Elected by Legislative Assembly)-**

91 (1006) Will the Minister for Revenue be pleased to state:-

a) the number of taluks which have been declared as drought prone by the State Government during 2023-24; the total extent of area in which the crop loss has been occurred; the loss caused for farmers due to the crop loss during kharif and rabi season; (complete information be furnished)

b) the total number of farmers for whom the crop loss has been occurred during kharif and rabi season; the number of farmers who have got the crop loss

compensation; the amount that has been paid; whether the compensation has been paid for all the farmers for whom the crop loss have occurred during kharif and rabi season; the number of farmers who have been excluded from the compensation and the reasons thereof; the criterias based on which the crop loss compensation has been paid; the eligibility that has been prescribed to pay the same; (complete information be furnished)

c) whether it is true that only the crop loss has been considered for the shortage of rain; whether it has come to the notice of the Government that the compensation has not been provided for farmers who are not able to grow the crop, faced hardship from the shortage of water in the reservoir which has caused the crop loss during rabi season; if so, the number of farmers to whom the compensation has not been distributed; the reasons for the same; the reasons for which they have not been considered; (complete information be furnished)

d) the compensation that has been provided by the State Government to the farmers for whom there is caused crop loss; the amount that has been sanctioned by the Central Government for the compensation of crop loss; the amount that has been utilised by the State Government; the purpose for which the said amount has been utilised; the compensation that has been provided by the Government for the farmers from its own fund till date; (complete information be furnished)

e) whether the compensation that has been paid for crop loss during both kharif and rabi season or it has considered in only one season; if it has been considered for only one season, whether it has caused injustice to the farmers; whether the measures have to be taken by the Government to provide the compensation for crop loss during both seasons due to drought throughout the year? (complete information be furnished)

## LAND CONVERSION IN KODAGU DISTRICT

**Sri Kushalappa M.P. (suja) (Local Authorities Constituency)-**

92 (950) Will the Minister for Revenue be pleased to state:-

a) the number of proposals that have been received for land conversion of coffee plantations and other lands in Kodagu district during the last 3 years and the particulars thereof; the number of proposals for which the land has been converted by approving the said proposals; and the particulars thereof; acre and talukwise details be furnished;

b) whether it has come to the notice of the Government that there are local oppositions and protests are being taken place continuously for land conversion; the reasons for which they are protesting ;

c) the reason for which the land conversion is being carried out in between the opposition and protests; or whether there is no provision in the departmental rules for not giving the permission to proposals that have been received for seeking land conversion; whether there is a law which is making provision for according the approval of land conversion as continuous process is in force in the State ;

d) the steps taken by the Government to drop the procedure of this land conversion?

## GROCERIES FOR ANNA PRASADA IN SRI KUKKE SUBRAMANYA TEMPLE

**Sri U.B. Venkatesh (Nominated)-**

93 (927) Will the Minister for Transport and Muzrai be pleased to state:-

a) whether it has come to the notice of the Government that the groceries for Anna Prasada are being purchased directly at market rate without purchasing through e-tender in Sri Subramanya Temple of Kukke village of Kadaba taluk of Dakshina Kannada district;

b) the contractual facts regarding to the purchase of the same in market rate; the date on which the contract period would be terminated;

c) whether the priority would be given to e-tender in prior to new contract?

## MISAPPROPRIATION OF AMOUNT IN FISHERIES DEPARTMENT

**Sri Thippanappa Kamaknoor (Elected by Legislative Assembly)-**

94 (910) Will the Minister for Fisheries and Ports and Inland Water Transport be pleased to state:-

a) the particulars of region of the State in which the blue revolution scheme has been implemented; the amount that has been spent for this scheme during the last 2 years; (the information along with the details of amount that has been sanctioned to the beneficiaries of Kalyana Karnataka region be furnished)

b) the amount that has been spent for the departmental programme/exhibitions in the district and taluk level for the information of public in the interest of fish farming; (the information during the last 2 years be furnished)

c) whether the training has been provided with regard to fish farming; the prevailing criteria for the selection of this training; the number of people to whom the training has been provided; and the amount that has been spent to them; (the information related to Kalyana Karnataka region be furnished)

d) whether it has come to the notice of the Government that the crores of amount has been misappropriated every month in the pretext of this training; whether the Government has come forward for the investigation with regard to huge misappropriation has been occurred in the distribution of equipment and vehicles to fishermen;

e) the amount that has been spent for the fish seed stocking in the reservoirs during the last 2 years; (reservoirwise details be furnished) the criteria to be followed while purchasing the fish seedlings and farming; whether it has come to the notice of the Government that the crores of rupees have been misappropriated in the pretext of fish seed stocking;

f) the place where and the amount that has been spent in the pretext of construction of jetty and fish landing centres for fisheries and renovation; workwise details be furnished; whether it has come to the notice of the Government that the amount that has been misappropriated without proper execution of these works;

g) the amount that has been spent by the Government for the development of inland fisheries during the last three years; whether the investigation would be carried out with regard to the misappropriation of amount along with the scheme?( information be furnished)

## PENSION TO DIFFERENTLY ABLED PERSONS

**Sri Y.M. Satish (Local Authorities Constituency)-**

95 (882) Will the Minister for Revenue be pleased to state:-

a) the amount of pension that is being provided to differently abled persons in the State; the basis on which and the amount of pension is being provided; (information along with copies of the Government order be furnished)

b) the number of differently abled persons to whom the pension is being provided in the State; (districtwise information be furnished)

c) the total amount that has been earmarked in the budget for the pension of differently abled persons in the State; the information during the last three years be furnished;

d) whether there is any proposal/recommendations before the Government for enhancement of pension for differently abled persons in the State; if not, the stand of the Government with regard to enhancement of pension for them, as they are very few in number? (information be furnished)

**TOWNSHIPS CONSTRUCTION BY HOUSING BOARD**

**Sri Govinda Raju (Elected by Legislative Assembly)**

96 (919) Will the Minister for Housing, Wakf and Minority Welfare be pleased to state:-

a) the number of townships that are being constructed by the Karnataka Housing Board at present;

b) the present stage of the construction of township with state of art facility that has been intended to be built in Hoskote and Devanahalli;

c) the number of applications that have been received already for the said site; and the amount that has been fixed for the application fee and initial deposits;

d) the amount that has been paid so far and the particulars of the bank in which the amount of payment has been deposited; the interest has been paid in the form of deposit;

e) the extent of acre of required land that has been acquired for the township and whether the complete compensation has been provided for farmers who have lost the land; if so, the amount of compensation that has been provided or the reasons for the compensation has not been provided? (information be furnished)

**ERROR IN KAVERI 2.0 SOFTWARE**

**Sri Chidanand M.Gowda (Graduates' Constituency)**

97 (858) Will the Minister for Revenue be pleased to state:-

a) during the registration in the Kaveri 2.0 software if there is a family with more people, it is being logging out when the time has been expired to upload their details and photo, whether the provision has been provided to continue the submission of application even though the prescribed time limit has been expired instead of uploading again;

b) the measures taken by the Government for resolve the problems of inefficiency in citizens login and failings of logins;

c) whether it has come to the notice of the Government that the hardship is being faced by public for not possible to getting the encumbrance certificate on time; if so, the step taken by the Government to resolve the said problem;

d) whether it has come to the notice of the Government that various kinds of hardship is being faced by public after upgrading Kaveri 2.0 software in the sub registrar's office; if so, the mesures taken by the Government to resolve the said problem;

e) if the registration has been cancelled due to the unanticipated reasons, whether the provision has been provided for the reimbursement of registration fee that has been paid; if not, the procedure of reimbursement of fee?

## WORK SANCTIONED BY PUBLIC WORKS DEPARTMENT

**Sri M.L. Anil Kumar (Local Authorities Constituency)**

98 (958) Will the Minister for Public Works be pleased to state:-

a) construction work of 123 K.M of four and six lane road which is providing industrial connection till Devanahalli, Vijayapura, H.Cross, Vemagal, Malur, Tamil Nadu border have been declared in the budget of 2023-24, the present stage of the tender process of DPR; the complete information regarding the said project be furnished; (complete details of the grants be furnished)

b) the complete information regarding the hybrid annuity project be furnished; the particulars of works that have been taken up under this project from the last 3 years to till date in Chikkaballapur and Kolar districts; (the complete information regarding the workwise and grantwise and present stage of the work in be furnished)

c) the particulars of works that have been taken up under various projects by the Public Works department during the last three years in Kolar and Chikkaballapur districts; the grant that has been sanctioned for this works? (workwise complete details be furnished)

## OUTSTANDING AMOUNT TO ROAD TRANSPORT CORPORATIONS

**Smt. Bharathi Shetty (Nominated)-**

99 (880) Will the Minister for Transport and Muzrai be pleased to state:-

a) the outstanding amount to be provided for various Road Transport Corporations by the Government; the reasons for the same;

b) the number of days within which this amount would be paid for the various corporations? (details be furnished)

## CONSTRUCTION OF RING ROAD TO BELAGAVI CITY

**Sri Nagaraju M. (Elected by Legislative Assembly)-**

100 (862) Will the Minister for Public Works be pleased to state:-

a) the work has planned earlier for the construction of the ring road to Belagavi city and it has been assigned to subsidiary of the Public Works department, the present stage of the said work;

b) the construction of the said ring road is being getting delayed for longtime, the reasons thereof;

c) whether the required land has been acquired by the Government for this road work; the time limit within which this work would be completed? (information be furnished)

## SLUM AREAS IN THE LIMITS OF BELAGAVI CITY CORPORATION

**Dr. Talwar Sabanna (Nominated)-**

101 (959) Will the Minister for Housing, Wakf and Minority Welfare be pleased to state:-

a) the number of declared and non- declared slums which are coming in the limits of Belagavi City Corporation; and the particulars thereof; (details be furnished)

b) whether the title deed has been issued for the residents who are residing in the declared slums; the number of residents of declared slum to whom the title deed has to be issued; the reason for the delay; (details be furnished)

c) the date on which the step would be taken to provide the title deeds for the poor families who are residing from tens of years in the Janata flat of Mantamuri colony of sector No.7 which is coming under the ward No.35 in the limits of Belagavi City Corporation;

d) the measures taken by the Karnataka Slum Development Board and Belagavi Smart City Board with regard to development of slums which are coming under the Belagavi City Corporation? (details be furnished)

## PROPERTY OF SRI DHARMARAYA SWAMY TEMPLE

**Sri N. Ravikumar (Elected by Legislative Assembly)-**

102 (908) Will the Minister for Transport and Muzrai be pleased to state:-

a) whether there is an information in the Muzrai department with regard to 15 acre 12 gunta of land in the survey No.79 of Neelasandra village of Bengaluru urban is belongs to Sri Dharmaraya swamy temple, Tigalarapet of Bengaluru urban; the persons whose name is mentioned in the pahani of that land at

present; the extent of land that has been encroached; the reasons for not lodging the criminal case against the officers who have co-operated for that encroachment ; (details be furnished)

b) the reasons for the said land not being taken into the custody of the Muzrai department by the Government even after the Hon'ble Court passed the judgement that the said land is belonging to Muzrai department;

c) whether the compound has been constructed for the extent of more than 7 acre of land worth hundreds of crores of rupees that has been lying vacant without any encroachment at present; if not, the date on which the compound would be constructed; the number of officers against whom the criminal cases has been lodged who are the reasons for this delay; (details be furnished)

d) the details of immovable property of temples of the State; (district wise and temple wise details be furnished)

e) the total worth of immovable property of temples of the State; whether it has come to the notice of the Government regarding the encroachment of the land of temple; the steps taken for the eviction of the said encroachment; (details be furnished)

f) the step taken by the Government to execute the pahani in the name of respective God with regard to the property of temples; the extent of acres of land for which the pahani has been executed to the name of respective God during the last two years? (district wise details be furnished)

## REVISED GUIDANCE VALUE OF LANDS

**Sri P.H.Pujar (Local Authorities Constituency)-**

103 (996) Will the Minister for Revenue be pleased to state:-

a) the guidance value of the lands has been enhanced by the State Government during the last year across the

State, the particulars of supporting legal documents and circulars for enhancement of the same; the yardsticks which have been followed for the same; (information be furnished)

b) from the tens of years, there was non-enhancement of guidance value of twin districts of Bagalakot, Vijayapura but only in the last year, the land value has been enhanced in some of the taluks, the reasons for non enhancing the price of lands in Bagalkot, Hunagund and Babaleshwara and Bagewadi taluk in the limits of submerged area; whether the information has been received by the Government regarding the farmers would be deprived to get justifiable compensation as per the new law of land acquisition there of;

c) if so, whether the step would be taken by the Government to enhance the guidance value of lands in this taluks? (complete information be furnished)

**WORKS APPROVED BY THE GOVERNMENT DURING 2022-2023 AND 2023-2024**

**Sri Dinesh Gooligowda (Local Authorities Constituency)-**

104 (865) Will the Minister for Public Works be pleased to state:-

a) the particulars of works that have been sanctioned and approved by the Government during the year 2022-23;(assembly constituency wise information be furnished)

b) there after, out of the approved works, the particulars of works that have been withheld;(assembly constituency wise information be furnished)

c) out of the works that have been withheld by the Government after 20th may, 2023, the particulars of works for which the re-approval has been accorded; and the particulars of heads of Account under which the grant has been released for re-approval works; (assembly constituency wise information be furnished)

d) the particulars of heads of accounts under which the grant has been released by the State Government for various works during 2023-24? (assembly constituency wise information be furnished)

## LAND ACQUISITION BY NICE

**Sri H.S. Gopinath (Local Authorities Constituency)-**

105 (984) Will the Minister for Public Works be pleased to state:-

a) the total extent of area/land that has been provided to NICE; and the basis on which the land has been acquired from the farmers and public;

b) the extent of land that has been acquired again by constructing the road already by NICE; and the purpose for which the land has been acquired;

c) the amount of compensation that has been provided for the property of land that has been obtained from the farmers and public by the NICE till date and the particulars of the criteria that will be considered for the compensation; (details be furnished)

d) the total number of complaints have been lodged against the NICE till date;

e) the particulars of the purpose for which the land has been acquired by NICE; the details of the works for which they are being utilised at present? (details be furnished)

**K.R. MAHALAKSHMI**
Secretary
Karnataka Legislative Council

Government Press, Vikasa Soudha Unit, Bengaluru, WD- 278 - Copies